**ಶ್ರೀ ಬಿ.ಎನ್. ಶ್ರೀಕಂಠಯ್ಯ ಮತ್ತು ಮಕ್ಕಳು ಜಯನಗರ, ಬೆಂಗಳೂರು ಇವರ ಮನೆಯಲ್ಲಿ ಆಹಾರ ಧಾನ್ಯಗಳು ದಾಸ್ತಾನು ಹೊಂದಿರುವುದು.**

1013 - ಶ್ರೀ ಎಂ. ನಾರಾಯಣಸ್ವಾಮಿ, (ಬೇತಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶ್ರೀ ಬಿ.ಎನ್. ಶ್ರೀಕಂಠಯ್ಯ ಮತ್ತು ಮಕ್ಕಳು ಜಯನಗರ, ಬೆಂಗಳೂರು ಇವರ ಮನೆಯಲ್ಲಿ ಹಾಗೂ ಇತರೆ ಶಾಖೆಗಳಲ್ಲಿ ಆಹಾರ ಧಾನ್ಯ ಅಂದರೆ ಅಕ್ಕಿ, ಬೇಳೆ, ಹಾಗೂ ಖಾದ್ಯತೈಲ ಇವುಗಳ ಹೆಚ್ಚಿನ ದಾಸ್ತಾನು ಹೊಂದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಾದರೆ ಸದರಿಯವರ ನಿವಾಸ 39ನೇ 'ಸಿ' ಕ್ರಾಸ್. ಜಯನಗರ, 5ನೇ ಬ್ಲಾಕ್ ಮತ್ತು ಗಾಂಧಿಬಜಾರ್ ನಲ್ಲಿ ಆಹಾರ ಧಾನ್ಯಗಳ ದಾಸ್ತಾನು ಹೊಂದಿರುವ ಬಗ್ಗೆ ಸರ್ಕಾರದ ಗಮನಕ್ಕೆ ತಿಳಿದಿದೆಯೇ?*

ಇ) *ಸರ್ಕಾರವು ಈ ಡಿಪಾರ್ಟ್‌ಮೆಂಟ್ ಸ್ಟೋರ್ಸ್‌ನಲ್ಲಿರುವ ಹೆಚ್ಚುವರಿ ಆಹಾರ ದಾಸ್ತಾನನ್ನು ತಕ್ಷಣವೇ ಮುಟ್ಟುಗೋಲು ಹಾಕಿಕೊಳ್ಳಬಾರದೇಕೆ?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು - ಆದರೆ ಅಗತ್ಯ ವಸ್ತುಗಳ ಅಧಿ ನಿಯಮದಡಿಯಲ್ಲಿ ನಿಗಧಿಪಡಿಸಲಾದ ಸಂಗ್ರಹಣಾ ಮಿತಿಯಲ್ಲಿರುತ್ತದೆ.

ಆ) ಅದೇ

ಇ) ಶ್ರೀ ಬಿ.ಎನ್. ಶ್ರೀಕಂಠಯ್ಯ ಮತ್ತು ಮಕ್ಕಳು ಜಯನಗರ, ಬೆಂಗಳೂರು ಇವರು ನಡೆಸುತ್ತಿರುವ 4 ಶಾಖೆಗಳ ಪೈಕಿ ಒಂದನ್ನು ವ್ಯಾಪಾರ ಮಾಡದೇ ಮುಚ್ಚಿರುವುದರಿಂದ ಒಂದು ಶಾಖೆಗೆ ಅಗತ್ಯ ವಸ್ತುಗಳ ಲೈಸೆನ್ಸ್ ಪಡೆದು ಲೆಕ್ಕ ಪತ್ರಗಳನ್ನು ಕ್ರಮವಾಗಿದ್ದುದು ತಾಳೆಯಾಗುತ್ತಿದ್ದು ದಾಸ್ತಾನು ಪರಿಮಿತಿ ಉಲ್ಲಂಘನೆ ಯಾಗಿರುವುದಿಲ್ಲವಾದುದರಿಂದ ಮತ್ತು ಎರಡು ಶಾಖೆಗಳಲ್ಲಿರುವ ದಾಸ್ತಾನು ಬಹಳ ಕನಿಷ್ಠ ಪ್ರಮಾಣದಲ್ಲಿರುವುದರಿಂದ ಅಗತ್ಯ ವಸ್ತುಗಳ ಕಾಯ್ದೆಯನುಸಾರ ದಾಸ್ತಾನು ಪರಿಮಿತಿ ಉಲ್ಲಂಘನೆಯಾಗದೇ ಇರುವುದರಿಂದ ದಾಸ್ತಾನನ್ನು ಮುಟ್ಟುಗೋಲು ಹಾಕಿಕೊಳ್ಳಲು ಬರುವುದಿಲ್ಲ.

**ಬಾಡಿಗೆ ಕುಟುಂಬದಾರರುಗಳಿಗೆ ಹೊಸ ಪಡಿತರ ಚೀಟಗಳನ್ನು ವಿತರಿಸುವುದು**

1421 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಬಾಡಿಗೆ ಕುಟುಂಬದಾರರುಗಳಿಗೆ ಹೊಸ ಪಡಿತರ ಚೀಟಿಗಳನ್ನು ವಿತರಣೆ ಮಾಡುವಾಗ ಮನೆ ಮಾಲೀಕರುಗಳ ಪಡಿತರ ಚೀಟಿಯನ್ನು ನೀಡಲು ಅಥವಾ ಹಾಜರು ಪಡಿಸಲು ಒತ್ತಾಯ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರೀತಿ ಮಾಡುವುದರಿಂದ ಈಗಾಗಲೇ ಗೊತ್ತಿರುವಂತೆ ಸಾಮಾನ್ಯವಾಗಿ ಮನೆ ಮಾಲೀಕರುಗಳು ಮತ್ತು ಬಾಡಿಗೆದಾರರ ಸಂಬಂಧಿಗಳು ಅನ್ಯೋನ್ಯವಾಗಿರುವು ದಿಲ್ಲವಾದ್ದರಿಂದ ಕಾರ್ಡುಗಳನ್ನು ಬಾಡಿಗೆದಾರರು ಪಡೆದುಕೊಳ್ಳುವುದು ಅಸಾಧ್ಯವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*